**ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್**

**(ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ)**

**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ**

5ನೇ ಮಹಡಿ, ಪೂರ್ವ ದ್ವಾರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560 001.

ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/ಆಡಳಿತ/17/2017-18 ದಿನಾಂಕ:23.02.2018

ರವರಿಗೆ,

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್ ಕಾರ್ಯಾಲಯ,
ರಾಜ್ಯದ ಎಲ್ಲಾ ಜಿಲ್ಲೆಗಳು.

ಮಾನ್ಯರೇ,

ವಿಷಯ: ದಿನಾಂಕ:04.03.2018ರಂದು ಆಯೋಜಿಸಲಾಗುತ್ತಿರುವ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕದಲ್ಲಿ 'ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು' ಹಾಗೂ 'ವಲಯ ಮೇಲ್ವಿಚಾರಕರು' ಹುದ್ದೆಗಳ ಆಯ್ಕೆಯ ಪರೀಕ್ಷಾ ವೇಳೆ ಹಾಗೂ ಪರೀಕ್ಷಾ ವಿಧಾನದ ಬಗ್ಗೆ ಅನುಸರಿಸಬೇಕಾದ ಸೂಚನೆಗಳು.

ಉಲ್ಲೇಖ: ಈ ಕಚೇರಿಯ ಪತ್ರದ ದಿನಾಂಕ:23.01.2018 ರಲ್ಲಿ ಅನುಬಂಧ-1ರಲ್ಲಿ ಲಗತ್ತಿಸಿರುವ ಮಾದರಿ ಪ್ರವೇಶ ಪತ್ರ.

---*/*/*---

ಮೇಲ್ಕಂಡ ಉಲ್ಲೇಖಿದನ್ವಯ ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆಯಡಿ ಸೃಜಿಸಲಾಗಿರುವ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕದಲ್ಲಿ ಹೊರಗುತ್ತಿಗೆ ಮೇಲೆ 'ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು' ಹಾಗೂ 'ವಲಯ ಮೇಲ್ವಿಚಾರಕರು' ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ಈ ಕಚೇರಿಯಿಂದ ತಿಳಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ:04.03.2018ರಂದು ಆಯೋಜಿಸಲಾಗುತ್ತಿರುವ ಲಿಖಿತ ಪರೀಕ್ಷೆಗೆ ಸಂಬಂಧಿಸಿದಂತೆ, ಪರೀಕ್ಷಾ ವೇಳೆ ಹಾಗೂ ಪರೀಕ್ಷಾ ವಿಧಾನದಲ್ಲಿ ಈ ಸೂಚನೆಗಳನ್ನು ಜಾಜೂ ತಪ್ಪದೇ ಪಾಲಿಸುವುದು.

1) **ಪರೀಕ್ಷೆಯ ಅವಧಿ:-**

| ಕ್ರಸಂ | ಹುದ್ದೆಯ ಹೆಸರು | ಅವಧಿ |
|---|---|---|
| 1 | ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು | ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.15 ರವರೆಗೆ |
| 2 | ವಲಯ ಮೇಲ್ವಿಚಾರಕರು | ಮಧ್ಯಾಹ್ನ 2.30 ರಿಂದ 3.45 ರವರೆಗೆ |

2) **ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಪ್ರವೇಶಿಸುವ ಮುನ್ನ ಸೂಚನೆಗಳು:-**

1) ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರ ಹುದ್ದೆಗೆ ಲಿಖಿತ ಪರೀಕ್ಷೆಯನ್ನು ಬರೆಯಲಿಚ್ಛಿಸುವ ಅಭ್ಯರ್ಥಿಗಳು ಬೆಳಿಗ್ಗೆ 10.30 ಗಂಟೆಯ ಒಳಗೆ ಸಂಬಂಧಪಟ್ಟ ಪರೀಕ್ಷಾ ಕೇಂದ್ರದಲ್ಲಿ ಹಾಜರಿರತಕ್ಕದ್ದು.

2) ವಲಯ ಮೇಲ್ವಿಚಾರಕರ ಹುದ್ದೆಗೆ ಲಿಖಿತ ಪರೀಕ್ಷೆಯನ್ನು ಬರೆಯಲಿಚ್ಛಿಸುವ ಅಭ್ಯರ್ಥಿಗಳು ಮಧ್ಯಾಹ್ನ 2.00 ಗಂಟೆಯ ಒಳಗೆ ಸಂಬಂಧಪಟ್ಟ ಪರೀಕ್ಷಾ ಕೇಂದ್ರದಲ್ಲಿ ಹಾಜರಿರತಕ್ಕದ್ದು.

3) ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಪ್ರವೇಶ ಪತ್ರ ಹಾಗೂ ಅವರು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿದ ಆಧಾರ್ ಕಾರ್ಡ್‌ನ ಪ್ರತಿಯನ್ನು ಹಾಜರುಪಡಿಸುವುದು ಕಡ್ಡಾಯವಾಗಿರುತ್ತದೆ. ಆಧಾರ್ ಕಾರ್ಡ್ ಪಡೆಯಲು ಅರ್ಜಿ ಸಲ್ಲಿಸಿ, ಆಧಾರ್ ಕಾರ್ಡ್ ಸ್ವೀಕೃತಿಯಾಗದ ಅಭ್ಯರ್ಥಿಗಳು ಭಾವಚಿತ್ರ ಇರುವ ಮತ್ತೊಂದು ಭಾವಚಿತ್ರ ಇರುವ ಗುರುತಿನ ಚೀಟಿಯನ್ನು (ಡ್ರೈವಿಂಗ್ ಲೈಸೆನ್ಸ್ / ಚುನಾವಣಾ ಐ.ಡಿ. (ಇ.ಪಿ.ಐ.ಸಿ.)/ಪಾಸ್‌ಪೋರ್ಟ್/ಪಾನ್ ಕಾರ್ಡ್/ಸರ್ಕಾರಿ ಸಂಸ್ಥೆಯು ನೀಡಿರುವ ಭಾವಚಿತ್ರ ಇರುವ ಐ.ಡಿ.,) ಕಡ್ಡಾಯವಾಗಿ ಹಾಜರುಪಡಿಸಬೇಕು. ಗುರುತಿನ ಚೀಟಿಯನ್ನು ಹಾಜರುಪಡಿಸದೇ ಇರುವಂತಹ ಅಭ್ಯರ್ಥಿಗಳಿಗೆ ಪ್ರವೇಶವನ್ನು ನಿರಾಕರಿಸುವುದು.

---2

4) ಅಭ್ಯರ್ಥಿಗಳು ಮೊಬೈಲ್, ಟ್ಯಾಬ್, ಬ್ಲೂಟೂತ್, ಡಿಜಿಟಲ್ ವಾಚ್ ಮತ್ತು ಇತರೆ ಯಾವುದೇ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ಪರೀಕ್ಷಾ ಕೇಂದ್ರಕ್ಕೆ ತರುವುದನ್ನು ನಿಷೇಧಿಸುವುದು. ಆದಾಗ್ಯೂ ಅಭ್ಯರ್ಥಿಯು ಪರೀಕ್ಷಾ ಕೊಠಡಿಯಲ್ಲಿ ಇವುಗಳನ್ನು ಇಟ್ಟುಕೊಂಡಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಪರೀಕ್ಷೆಯಿಂದ ಅನರ್ಹಗೊಳಿಸುವುದು.

5) ಸದರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯು 60 ವಸ್ತುನಿಷ್ಠ ಬಹು ಆಯ್ಕೆ (Objective Multiple choice) ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

6) ಅಭ್ಯರ್ಥಿಗಳಿಗೆ ಒ.ಎಂ.ಆರ್ ಉತ್ತರ ಹಾಳೆಯನ್ನು ನೀಡುವುದು ಹಾಗೂ ಅಭ್ಯರ್ಥಿಗಳು ಪ್ರಶ್ನೆಗಳಿಗೆ ಕಪ್ಪು ಶ್ಯಾಯಿಯ ಬಾಲ್ ಪಾಯಿಂಟ್ ಪೆನ್ (black ball point pen) ನಿಂದ ಮಾತ್ರ ಉತ್ತರಗಳನ್ನು ಗುರುತಿಸುವುದು.

7) ಮೇಲ್ಕಂಡ ಎಲ್ಲಾ ಅಂಶಗಳನ್ನು ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಪಂಚಾಯತ್‌ನ ಅಧಿಕೃತ ವೆಬ್‌ಸೈಟ್‌ನಲ್ಲಿ ಕಾಣುವಂತೆ ಕಾಲೋಚಿತಗೊಳಿಸುವುದು ಹಾಗೂ ಅಭ್ಯರ್ಥಿಗಳಿಗೆ ನೀಡಲಾಗುವ ಪ್ರವೇಶಪತ್ರದಲ್ಲಿಯೂ ಸಹ ನಮೂದಿಸುವುದು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಅನುಸರಿಸುವ ಮೂಲಕ ಮೇಲ್ಕಂಡ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಈ ಕಚೇರಿಗೆ ವರದಿಯನ್ನು ಸಲ್ಲಿಸುವಂತೆ ಈ ಮೂಲಕ ಕೋರಲಾಗಿದೆ.

ತಮ್ಮ ವಿಶ್ವಾಸಿ,

(ಅನಿರುದ್ಧ್ ಶ್ರವಣ್.ಪಿ, ಭಾ.ಆ.ಸೇ.)
ಅಭಿಯಾನ ನಿರ್ದೇಶಕರು-ಎನ್.ಆರ್.ಎಲ್.ಎಂ.,
ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್,
ಬೆಂಗಳೂರು.

ಪ್ರತಿಯನ್ನು:-

1) ಯೋಜನಾ ನಿರ್ದೇಶಕರು, ಡಿಆರ್‌ಡಿಎ, ಜಿಲ್ಲಾ ಪಂಚಾಯತ್, ರಾಜ್ಯದ ಎಲ್ಲಾ ಜಿಲ್ಲೆಗಳು.
2) ಕಚೇರಿ ಪ್ರತಿ.